# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ 11/11/2021 ರಂದು ನಡೆದ ವಾರ್ಡ್ ಕಮಿಟಿ ಸಭೆಯಲ್ಲಿ ಚರ್ಚಿಸಲಾದ ವಿಷಯಗಳು ವಾರ್ಡ್ 77 ದತ್ತಾತ್ರೇಯ ದೇವಸ್ಥಾನದ ಸಭೆಯ ನಡವಳಿಗಳು

1. ಹಿಂದಿನ ಸಭೆಯ ನಡುವಳಿಯಂತೆ ಅಂದರೆ ದಿನಾಂಕ:04.10.2021 ರಂದು ನಡೆದ ಸಭೆಯಲ್ಲಿ ಚರ್ಚಿಸಿದಂತೆ ದಿನಾಂಕ:03.10.2021 ರಂದು ಬಿದ್ದಂತಹ ಬಾರಿ ಮಳೆಗೆ ದೊಡ್ಡ ಮೋರಿಗೆ ನೀರು ನುಗ್ಗಿ ಕೆಲ ಪ್ರದೇಶಗಳಲ್ಲಿ ಮನೆಯೊಳಗೆ ನೀರು ನುಗ್ಗಿ ತುಂಬ ತೊಂದರೆಯಾಗಿರುವುದಾಗಿ ಸಭೆಯಲ್ಲಿ ತಿಳಿಸಿದ ಮೇರೆಗೆ ಸಂಬಂಧಿಸಿದ SWD ಅಧಿಕಾರಿಗಳೊಂದಿಗೆ ಸ್ಥಳ ತಪಾಸಣೆ ನಡೆಸಿ, ತದನಂತರ JCB ಮುಖಾಂತರ ದೊಡ್ಡ ಮೋರಿಯಲ್ಲಿ Desiting ಮಾಡಿಸಲಾಗಿದ್ದು ಈಗ ಪರಿಸ್ಥಿತಿ ಸುಧಾರಣೆಯಗಿದೆ ಎಂದು ಸಭೆಗೆ ಕಾರ್ಯದರ್ಶಿಯವರು ತಿಳಿಸಿದರು. ಇದಕ್ಕೆ ಸಭೆಯು ಅಭಿನಂದನೆ ಸಲ್ಲಿಸಿತ್ತು.
2. ಪೋಲಿಸ್ ಇಲಾಖೆಗೆ ಸಂಬಂಧಿಸಿದಂತೆ, ಕೇಲವು ಅನಧಿಕೃತವಾಗಿ ಸುಮಾರು ದಿನಗಳಿಂದ ನಿಲುಗಡೆಯಾಗಿರುವ ಹಳೆಯ ವಾಹನಗಳನ್ನು ತೆರವುಗೊಳಿಸಲು ಈ ಹಿಂದಿನ ಸಭೆಯಲ್ಲಿ ತೀರ್ಮಾನಿಸಿದ್ದರು ಸಹ ಪೋಲಿಸ್ ಇಲಾಖಾ ಅಧಿಕಾರಿಗಳು ವಾಹನಗಳನ್ನು ತೆರವುಗೊಳಿಸದೇ ಮತ್ತು ಸಭೆಗೂ ಸಹ ಹಾಜರಾಗದೇ ಇರುವುದು ಕಂಡುಬಂದಿರುತ್ತದೆ. ಅದ್ದರಿಂದ ಇನ್ನೂ ಮುಂದೆ ಸಭೆಗೆ ಸದರಿಯವರು ಕಡ್ಡಾಯವಾಗಿ ಗೈರುಹಾಜರಾಗಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.
3. BWSSB- ವತಿಯಿಂದ ಬಂದ ದೂರುಗಳನ್ನು ಸರಿಪಡಿಸಲಾಗಿದೆ ಎಂದು ಸಭೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳು ತಿಳಿಸಿದರು.
4. Electrical Dept ವತಿಯಿಂದ ವಿದ್ಯುತ್ ದೀಪಗಳು ಅಳವಡಿಸಲು ಸಭೆಯಲ್ಲಿ ಚರ್ಚಿಸಿದ್ದು ವಿದ್ಯುತ್ ದೀಪಗಳನ್ನು ಅಳವಡಿಸಲಾಗಿರುತ್ತದೆ ಎಂದು ಮಾಹಿತಿ ನೀಡಿದರು.
5. Health Dept ವತಿಯಿಂದ ಕೆಲವು ಪ್ರದೇಶಗಳಿಗೆ ಪಿ.ಕೆ ಗಳು ಕಸ ಗೂಡಿಸಲು ಯಾರು ಬರುವುದಿಲ್ಲ ಎಂದು ಸಭೆಯಲ್ಲಿ ದೂರಿದರು, ಇದಕ್ಕೆ ಸಂಬಂಧಿಸಿದ ಅಧಿಕಾರಿಗಳು ಪ್ರತಿ ನಿತ್ಯ ತಪಾಸಣೆ ನಡೆಸಿ ಸರಿಯಾಗಿ

ಪಿ.ಕೆ ಗಳು ಸರಿಯಾದ ರೀತಿಯಲ್ಲಿ ಸಮರ್ಪಕವಾಗಿ ದೂರು ಬಾರದಂತೆ ಕೆಲಸ ನಡೆಸುವುದಾಗಿ ಸಭೆಗೆ ತಿಳಿಸಿದರು.

6. BWSSB: ಪೈಪ್‌ಲೈನ್ ರಸ್ತೆ 9ನೇ ಅಡ್ಡರಸ್ತೆ, ಸ್ಯಾನಿಟರಿ ತುಂಬಿ ರಸ್ತೆಯಲ್ಲಿ ಹರಿಯುವುದಾಗಿ ದೂರು ಬಂದ ಹಿನ್ನಲೆಯಲ್ಲಿ ಸಭೆಗೆ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳು ಗೈರಾಜರಾಗಿದ್ದು, ನೋಟಿಸ್ ನೀಡಿ ಅವರ ಮೇಲಾಧಿಕಾರಿಗಳಿಗೆ ಮಾಹಿತಿ ನೀಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

7. BWSSB: ಬಸ್ ತಂಗುದಾಣ ಹಾಪ್‌ಕಾಮ್ಸ್ ಹತ್ತಿರ ಸ್ಯಾನಿಟರಿ ಪೈಪ್ ಲೈನ್ ಡ್ಯಾಮೇಜ್ ಹಾಗಿ ಕೊಳಚೆ ನೀರು ಸೋರಿಕೆಯಾಗುತಿರುವುದಾಗಿ ಸಭೆಯಲ್ಲಿ ತಿಳಿಸಿದ್ದು, ಸಂಬಂಧಪಟ್ಟ ಅಧಿಕಾರಿಗಳಿಗೆ ಸರಿಪಡಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

8. Project: ವತಿಯಿಂದ ವಾರ್ಡಿನ ರಾಜಾಶಂಕರ್ ಪಾರ್ಕ್ ಕಾಮಗಾರಿಯು ಕುಂಟಿತಗೊಂಡಿದ್ದು, ಸಂಬಂಧ ಪಟ್ಟ ಗುತ್ತಿಗೆದಾರರಿಗೆ ನೋಟಿಸ್ ಜಾರಿ ಮಾಡಿ ಕೆಲಸ ಮಾಡಿ ಮುಗಿದ ಸಾರ್ವಜನಿಕರಿಗೆ ಉಪಯೋಗಕ್ಕೆ ಬಿಟ್ಟುಕೊಡಲು ಸಂಬಂಧಪಟ್ಟ ಪ್ರಾಜೆಕ್ಟ್ ಅಧಿಕಾರಿಗಳಿಗೆ ಸೂಚಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

9. Jio Cable ನವರು ವಾರ್ಡ್ ಸುತ್ತ ಕೇಬಲ್ ಅಳವಡಿಸಲು PIT ನ್ನು ತೆಗೆದು ಸರಿಯಾಗಿ ಮುಚ್ಚದೆ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದಾಗಿ ಸಭೆಯಲ್ಲಿ ದೂರು ನೀಡಿದ್ದು ಸಂಬಂಧಪಟ್ಟ ಕೇಬಲ್‌ರವರಿಂದ ಸರಿಪಡಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

10. ದತ್ತಾತ್ರೇಯ ದೇವಸ್ಥಾನ ಹತ್ತಿರ Foot Path ನಲ್ಲಿ ಪೆಟ್ಟಿ ಅಂಗಡಿಗಳನ್ನು ತೆರವುಗೊಳಿಸಿ ಸಾರ್ವಜನಿಕರಿಗೆ ಓಡಾಡಲು ಅನುವು ಮಾಡಿಕೊಡುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು.

11. ವಾರ್ಡ್ ತುಂಬ Poth hole ಬಿದ್ದಿರುವುದಾಗಿ ಇದರಿಂದ ವಾಹನ ಸವಾರರಾಗಿಗೆ ಹಾಗೂ ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗುತ್ತಿರುವುದಾಗಿ ಕೂಡಲೇ ಗುಂಡಿಗಳನ್ನು ಮುಚ್ಚಿ

ಸಾರ್ವಜನಿಕರಿಗೆ ಓಡಾಡುವುದಕ್ಕೆ ಅನುವು ಮಾಡಿಕೊಡಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

12. SHI: ವಾರ್ಡಿನಲ್ಲಿ ತುಂಬ ಸೊಳ್ಳೆ ಜಾಸ್ತಿಯಾಗಿದ್ದು, ಕೂಡಲೇ ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ತೆಗೆದು ಕೊಳ್ಳುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು.

13. ದತ್ತಾತ್ರೇಯ ದೇವಾಸ್ಥನ ಮುಭಾಂಗದ ಹಳೆಯ Foot Path ನಲ್ಲಿ ಹಣ್ಣುಗಳು, ತರಕಾರಿಗಳನ್ನು ಮಾರುತ್ತಿದ್ದು ಸಾರ್ವಜನಿಕರಿಗೆ ಓಡಾಡಲು ತುಂಬ ತೋಂದರೆಯಾಗುತ್ತಿರುವುದಾಗಿ, ದೂರು ಬಂದಿದ್ದು ಸಭೆಯಲ್ಲಿ ಈ ಕೂಡಲೇ ಕ್ರಮ ತೆಗೆದು ಕೊಳ್ಳಲು ತೀರ್ಮಾನಿಸಲಾಯಿತು.

14. SWM ನಿಂದ Dry Waste ಮತ್ತು Wet Work ಬಗ್ಗೆ Mike Annocement ಮಾಡಲು ಸಭೆಯಲ್ಲಿ ದೂರು ನೀಡಿದ್ದು ಸಂಬಂಧಿಸಿದ ಅಧಿಕಾರಿಗಳಿಗೆ ಕ್ರಮ ತೆಗೆದು ಕೊಳ್ಳಲು ಸೂಚಿಸಲಾಯಿತು.

15. ಪೋಲಿಸ್ ಇಲಾಖಾ ವತಿಯಿಂದ ಯಲ್ಲಪ್ಪ ಗಾರ್ಡ್ನ್ ಹತ್ತಿರ ಬಹಳ ದಿನಗಳಿಂದ ಧೂಮಪಾನ ಮಾಡುತ್ತಿದ್ದು, ಕೂಡಲೇ ತೆರವುಗೊಳಸಿಲು ಸಂಬಂಧಪಟ್ಟ ಪೋಲಿಸ್ ಅಧಿಕಾರಿಗಳಿಗೆ ಸೂಚಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಅಧ್ಯಕ್ಷರ/ನೋಡಲ್ ಅಧಿಕಾರಿಯ ಅನುಮತಿಯೊಂದಿಗೆ ಸಭೆಯನ್ನು ಮುಕ್ತಾಯಗೊಳಸಲಾಯಿತು.

ನೋಡಲ್ ಅಧಿಕಾರಿಗಳು
ವಾರ್ಡ್ ಸಂ.77,
ದತ್ತಾತ್ರೇಯ ದೇವಸ್ಥಾನ
ವಾರ್ಡ್

ಪ್ರತಿಯನ್ನು:-

1. ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಜಂಟಿ ಆಯುಕ್ತರು (ಪಶ್ಚಿಮ) ರವರ ಮಾಹಿತಿಗಾಗಿ ಸಲ್ಲಿಸಿದೆ.